17)	ಗುಲ್ಬರ್ಗ	-	-	10
18)	ರಾಯಚೂರು	-	-	7
19)	ಬಳ್ಳಾರಿ	-	-	4
20)	ಉತ್ತರ ಕನ್ನಡ	-	1	6
	ಒಟ್ಟು	9	14	200

ಒಪ್ಪಂದದ ಆಧಾರದ ಮೇಲೆ ನೇಮಕಾತಿ ಮಾಡಿದ ವೈದ್ಯಾಧಿಕಾರಿಗಳು

253 - ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 2 ವರ್ಷಗಳಲ್ಲಿ ಒಪ್ಪಂದದ ಆಧಾರದ ಮೇಲೆ ನೇಮಕಾತಿ ಮಾಡಿದ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು?

ಆ) ಕಾಯ್ದಿರಿಸಿದ ಪಟ್ಟಿಗಳಲ್ಲಿ ಎಷ್ಟು ಅಭ್ಯರ್ಥಿಗಳು ನೇಮಕಾತಿ ಆದೇಶಗಳ ನಿರೀಕ್ಷಣೆಯಲ್ಲಿದ್ದಾರೆ?

ಇ) ಕಾಯ್ದಿರಿಸಿದ ಪಟ್ಟಿಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಭ್ಯರ್ಥಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು)

ಈ) ಯಾವ ಸಮಯದಲ್ಲಿ ತೀರ್ಮಾನಿಸಲಾಗುವುದು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 75 ವೈದ್ಯಾಧಿಕಾರಿಗಳು.

ಆ) ಆಯ್ಕೆ ಸಮಿತಿಯು ಕಾಯ್ದಿರಿಸಿದ ಪಟ್ಟಿಯನ್ನು ತಯಾರಿಸಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆ

280 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದಾಗಬೇಕು)

ಆ) ಖಾಲಿಯಿರುವ ಹುದ್ದೆಗಳನ್ನು ತುಂಬಲು ಸರ್ಕಾರ ಉದ್ದೇಶಿಸಿದೆಯೇ?

ಇ) ಎಷ್ಟು ಹುದ್ದೆಗಳನ್ನು ಯಾವ ವಿಧಾನದಿಂದ ಆಯ್ಕೆ ಮಾಡಿ ತುಂಬಲು ಸರ್ಕಾರ ತೀರ್ಮಾನಿಸಿದೆ.

ಈ) ಈ ಬಗ್ಗೆ ಸರ್ಕಾರ ನಿರ್ದಿಷ್ಟ ಹಾಗೂ ನಿಖರವಾದ ಸ್ಪಷ್ಟ ನಿರ್ಣಯ ಮತ್ತು ಕ್ರಮಗಳನ್ನು ತೆಗೆದುಕೊಂಡಿದೆಯೇ?

ಉ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದ ನೀತಿ ಮತ್ತು ನಿಯಮಗಳೇನು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) 18,934 ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತದೆ. ತಾಲ್ಲೂಕುವಾರು ವಿವರ ಲಭ್ಯವಿರುವುದಿಲ್ಲ. ಜಿಲ್ಲಾವಾರು ಹುದ್ದೆಯ ವಿವರಗಳನ್ನು ಇದರೊಂದಿಗೆ ಲಗತ್ತಿಸಿದೆ.

ಆ) ಹೌದು, ಪ್ರಕ್ರಿಯೆಯು ನಡೆಯುತ್ತಿದೆ.

ಇ) ಎಲ್ಲಾ ಖಾಲಿ ಹುದ್ದೆಗಳನ್ನು ಪ್ರಚಲಿತ ನೇಮಕಾತಿ ನಿಯಮಗಳ ಅನುಸಾರ ವಿದ್ಯಾರ್ಹತೆಗೆ ಮತ್ತು ಮೀಸಲಾತಿಗೆ ಅನುಗುಣವಾಗಿ ಆಯ್ಕೆ ಮಾಡಿ ನೇಮಕಾತಿ ಮಾಡಲಾಗುವುದು. ಇದರಲ್ಲಿ ಶೇ. 50ರಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ ಕಾಯ್ದಿರಿಸಿ ಆಯ್ಕೆ ಮಾಡಲಾಗುವುದು. ಗ್ರಾಮೀಣ ಅಭ್ಯರ್ಥಿಗಳಿಗೆ ಶೇಕಡ 5 ಕೃಪಾಂಕವನ್ನು ಅವರುಗಳು ಪಡೆಯುವ ಎಸ್‌ಎಸ್‌ಎಲ್ಸಿ ಹಾಗೂ ಟಿಸಿಹೆಚ್ ಸರಾಸರಿ ಶೇಕಡವಾರು ಅಂಕಕ್ಕೆ ಸೇರಿಸಲಾಗುವುದು. ಇದೇ ರೀತಿ ಜಿಲ್ಲಾಪರಿಷತ್ ವತಿಯಿಂದ ನೇಮಕಗೊಂಡು ಕಾರ್ಯ ನಿರ್ವಹಿಸುತ್ತಿರುವ ಗೌರವಧನ ಶಿಕ್ಷಕರುಗಳಿಗೆ ಪ್ರತಿ ವರ್ಷದ ಸೇವೆಗೆ ಶೇ 2 ಕೃಪಾಂಕವನ್ನು ಸರಾಸರಿ ಶೇಕಡವಾರು ಅಂಕಕ್ಕೆ ಸೇರಿಸಲಾಗುವುದು.

ಈ) ಹೌದು.

ಉ) ಎಲ್ಲಾ ಹುದ್ದೆಗಳನ್ನು ನಿಯಮಗಳ ಅನುಸಾರ ತುಂಬಬೇಕೆಂಬುದು ಸರ್ಕಾರದ ನಿರ್ಧಾರ.

ಜಿಲ್ಲಾವಾರು ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳ ವಿವರ

ಕ್ರಮಾಂಕ	ಜಿಲ್ಲೆ	ಸಂಖ್ಯೆ
1.	ಬೆಂಗಳೂರು ಉತ್ತರ	150
2.	ಬೆಂಗಳೂರು ದಕ್ಷಿಣ	268
3.	ಬೆಂಗಳೂರು ಗ್ರಾಮಾಂತರ	1,655
4.	ಕೋಲಾರ	850
5.	ತುಮಕೂರು	869
6.	ಶಿವಮೊಗ್ಗ	753
7.	ಚಿತ್ರದುರ್ಗ	744
8.	ಮೈಸೂರು	1,380
9.	ಮಂಡ್ಯ	441
10.	ಹಾಸನ	825
11.	ಚಿಕ್ಕಮಗಳೂರು	1,021
12.	ದಕ್ಷಿಣ ಕನ್ನಡ	709
13.	ಕೊಡಗು	324
14.	ಬಿಜಾಪುರ	1,606
15.	ಧಾರವಾಡ	1,449
16.	ಉತ್ತರ ಕನ್ನಡ	775
17.	ಬೆಳಗಾಂ	1,358
18.	ಗುಲ್ಬರ್ಗ	1,118
19.	ರಾಯಚೂರು	867
20.	ಬೀದರ್	631
21.	ಬಳ್ಳಾರಿ	1,141
	ಒಟ್ಟು	18,934